ಅ) ಆಗಿಲ್ಲ. ಆದರೆ ಮಂಗಳೂರಿನಲ್ಲಿ ಪ್ರಸ್ತಾಪಿಸಿದ 1000 ಮೆ.ವ್ಯಾ. ಸಾಮರ್ಥ್ಯದ ಸ್ಥಾವರದಿಂದ ವಿದ್ಯುಚ್ಛಕ್ತಿಯನ್ನು ಖರೀದಿಸಲು ಮೆ: ಕೋಜೆಂಟ್ರಿಕ್ಸ್, ಅಮೆರಿಕ ಇವರೊಡನೆ ಚರ್ಚೆ ನಡೆಯುತ್ತಿದೆ. ಒಪ್ಪಂದಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಮೇಲೆ ಇನ್ನೂ ಚರ್ಚಿಸುತ್ತಿರುವುದರಿಂದ ಸದರೀ ದರವನ್ನು ನಿಗಧಿಪಡಿಸಿಲ್ಲ.

ಆ) 31 ಕಿರು ಜಲವಿದ್ಯುತ್ ಯೋಜನೆ ಹಾಗೂ 6 ವಾಯುಶಕ್ತಿ (ವಿಂಡ್ ಎನರ್ಜಿ) ಘಟಕಗಳು, ಖಾಸಗಿ ಕ್ಷೇತ್ರದಲ್ಲಿ ಅನುಮೋದಿಸಲಾಗಿದೆ. ಇವುಗಳಲ್ಲಿ ಅಗತ್ಯ ಬಂಡವಾಳದ ವಿವರದ ಪೂರ್ಣ ಮಾಹಿತಿ ಇರುವುದಿಲ್ಲ. ವಿಂಡ್ ಪ್ರಾಜೆಕ್ಟ್‌ಗಳನ್ನು ಕರ್ನಾಟಕ ವಿದ್ಯುತ್ ನಿಗಮದವರು ಎಂ.ಇ.ಎಸ್.ರವರ ಸಹಾಯಧನದೊಂದಿಗೆ ಕೈಗೊಳ್ಳುತ್ತಿದೆ. ಈ ಬಗ್ಗೆ ಈಗಾಗಲೇ ಕಪ್ಪಟಗುಡ್ಡ ಬೆಟ್ಟದ ಮೇಲೆ 2 ಮೆ. ವ್ಯಾ. ಸಾಮರ್ಥ್ಯದ ಪ್ರಾತಕ್ಷಿಕ ಯೋಜನೆಯನ್ನು ಕೈಗೆತ್ತಿಕೊಂಡು ಕೆಲಸ ಪ್ರಾರಂಭಿಸಲಾಗಿದೆ. ಇದಕ್ಕೆ ಬೇಕಾಗುವ ಬಂಡವಾಳ 1120 ಲಕ್ಷ ರೂ.ಗಳು. (ಇದರಲ್ಲಿ 642.2 ಲಕ್ಷ ರೂ.ಗಳನ್ನು ಎಂ.ಎನ್.ಇ.ಎಸ್. ರವರು ಸಹಾಯಧನವಾಗಿ ಕೊಡುತ್ತಾರೆ)

ಹೊಳೇನರಸೀಪುರ ತಾಲ್ಲೂಕಿನ ರಸ್ತೆ ದುರಸ್ತಿಕಾರ್ಯ

540- ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹೊಳೆನರಸೀಪುರ ತಾಲ್ಲೂಕಿನಲ್ಲಿ ರಸ್ತೆ ದುರಸ್ತಿಗಾಗಿ ಹಾಗೂ ಇತರೇ ಕಾಮಗಾರಿಗಾಗಿ 1993-94ರಲ್ಲಿ ಖರ್ಚು ಮಾಡಿದ ಹಣವೆಷ್ಟು?*

ಆ) *1994-95ರಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಹೊಳೆನರಸೀಪುರ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು?*

ಇ) *ಹೊಳೆನರಸೀಪುರ ತಾಲ್ಲೂಕಿನಲ್ಲಿ ರಸ್ತೆಯಲ್ಲಾ ದುರಸ್ಥಿಯಲ್ಲಿದ್ದು 1994-95ರಲ್ಲಿ ಹೆಚ್ಚುವರಿ ಹಣವನ್ನು ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 1993-94ರ ಸಾಲಿನಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ಖರ್ಚು ಮಾಡಿದ ವಿವರ ಕೆಳಕಂಡಂತಿದೆ:

1)	ರಸ್ತೆಗಳ ಅಭಿವೃದ್ಧಿ	:	35.06 ಲಕ್ಷ ರೂ.
2)	ರಸ್ತೆಗಳ ದುರಸ್ಥಿ	:	44.55 ಲಕ್ಷ ರೂ.
3)	ಕಟ್ಟಡಗಳ ನಿರ್ಮಾಣ	:	17.34 ಲಕ್ಷ ರೂ.
4)	ಕಟ್ಟಡಗಳ ದುರಸ್ಥಿ	:	4.01 ಲಕ್ಷ ರೂ.
			ಒಟ್ಟು 100.96 ಲಕ್ಷ ರೂ.

ಆ) 1994-95ರ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ಹೊಳೆನರಸೀಪುರ ತಾಲ್ಲೂಕಿಗೆ ಮಂಜೂರಾದ ಅನುದಾನ ಕೆಳಕಂಡಂತಿದೆ :

1)	ರಸ್ತೆಗಳ ಅಭಿವೃದ್ಧಿ	:	22.90 ಲಕ್ಷ ರೂ.
2)	ರಸ್ತೆಗಳ ದುರಸ್ಥಿ	:	44.27 ಲಕ್ಷ ರೂ.
3)	ಕಟ್ಟಡಗಳ ನಿರ್ಮಾಣ	:	22.10 ಲಕ್ಷ ರೂ.
4)	ಕಟ್ಟಡಗಳ ದುರಸ್ಥಿ	:	1.82 ಲಕ್ಷ ರೂ.
			ಒಟ್ಟು 91.09 ಲಕ್ಷ ರೂ.

ಇ) ಇಲ್ಲ.